ಎಷ್ಟೋ ಸಲ ಆಗಿಬಿಡುತ್ತಿತ್ತು. 'ಕಣ್ಣುಗಳು ಕಮಲಗಳು... ಹತ್ತಿಯ ಮೈಯೊಳು ಬಲು ಮೆತ್ತಾನೆ ಕಾಲ್ಗಳು' ಅನ್ನೋ ಹಾಡಿನಲ್ಲಿ 'ಅತ್ತೆಯ ಮೈಯೊಳು ಬಲು ಮೆತ್ತಾನೆ ಕಾಲ್ಗಳು' ಎಂದೇ ನಾನು ಬಹಳ ಕಾಲ ಹಾಡಿಕೊಂಡಿದ್ದೆ. ಧಾಟಿ ಮುಖ್ಯ, ರಾಗ ಮುಖ್ಯ. 'ಕೃಷ್ಣ' ಎಂದು ಬಂದರೆ ಅದು ಭಕ್ತಿಗೀತೆ. ಒಟ್ಟು ದೇವರ ಹೆಸರಿದ್ದರಾಯಿತು. ಅಲ್ಲಿ ವಿರಹವಿದೆಯೋ, ವಿಷಾದವಿದೆಯೋ ಎಂದು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಇಂಥ ಆತ್ಮವಿಶ್ವಾಸಯುತ ತಿಳಿವಳಿಕೆಯಿಂದಾಗಿ ನನ್ನ ಸಹಪಾಠಿಯೊಬ್ಬಳು 'ಮಧುರ ಮುರಳಿ ಲೋಲ, ನಡೆದೆ ನೀನು ಎಲ್ಲಿ, ಕೇಳುತಿಹಳು ರಾಧೆ' ಎಂಬ ಗೋಳು ಗೀತೆಯನ್ನು ಕಾರ್ಯಕ್ರಮವೊಂದರಲ್ಲಿ ಪ್ರಾರ್ಥನೆ ಎಂದು ತಿಳಿದು ಹಾಡಿದ್ದಳು. ಅದಕ್ಕೆ ಚಪ್ಪಾಳೆಗಳೂ ಬಿದ್ದಿದ್ದವು. ನಾನು ಐದನೆ ತರಗತಿಯಲ್ಲಿದ್ದಾಗ ನನ್ನ ತಂದೆಯೂ ನನಗೆ ಮೇಷ್ಟ್ರು. ಮಗನೂ ಹಾಡಬೇಕು ಎಂಬುದು ಅವರ ಇಚ್ಛೆ. ನಾನು ಎಷ್ಟೇ ದೇವರನ್ನು ಪ್ರಾರ್ಥಿಸಿಕೊಂಡರೂ ಬಿಡದೆ ಶಾರದಾ ಪೂಜೆಯ ದಿನ ಶಾರದಾ ಮಾತೆ ನನ್ನ ತಂದೆಯ ಮೂಲಕ ಹಾಡಲು ನನಗೆ ಅಪ್ಪಣೆ ಕೊಟ್ಟುಬಿಟ್ಟಳು. ನಾನು ಸಂಕೋಚ, ಭಯ, ಸಿಟ್ಟು, ಅಳುಗಳ ಸಮೇತ 'ಹೋಗದಿರೀ ಸೋದರರೆ, ಮನೆಯನು ತೊರೆದು ಹೋಗುವಿರಾ...' ಎಂದು 'ನಮ್ಮ ಊರು' ಚಿತ್ರದ ಗೀತೆ ಹಾಡಿದ್ದೆ. ...ಎಲ್ಲಿ ಸಾಧ್ಯ... ಹೇಳಿಕೊಂಡಿದ್ದೆ ಅಷ್ಟೆ. ನನ್ನ ಭಕ್ತಿಯನ್ನು ಕೇಳಿಸಿಕೊಂಡ ತಾಯಿ ಶಾರದಾಮಾತೆ ಮುಂದೆ ಎಂದೂ ಯಾವ ಅಪ್ಪಣೆಯನ್ನೂ ಕೊಡದೆ ಇಂದಿಗೂ ಸುಖವಾಗಿದ್ದಾಳೆ.

ಹಾಡಿನ ಜೊತೆ ಮ್ಯೂಜಿಕ್ಕನ್ನೂ ಹಾಡಿಕೊಳ್ಳುವುದು ನಮಗೆ ಒದಗಿ ಬಂದಿದ್ದ ಇನ್ನೊಂದು ಅಭ್ಯಾಸ. ಟಾಂವ್ ಟಾಂವ್ ಟಾಂವ್ ಟಾಂವ್..ಊ... ಊ... ಊ... ಉಉಉಊ... ಡೊಂವ್ ಡೊಂವ್ ಡೊಂವ್ ಡೊಂವ್ ...ಪಪ್ಪಾಪ ಪಾಪ ಪಾಪ, ಪಾಪ ಪಾಪ ...ಓ ಓ ...ಓ ಓ...ಓ ಓ ಓ ಓ... ಜಿಂಗ್ ಜಿಂಗ್ ಜಿಂಗ್ ಜಿಂಗ್ ...ಜಿಂಗು ಜಿಂಗು ಜಿಂಗು ಜಿಂಗು... ಎಂದು ಹೇಳಿಕೊಂಡು 'ಅತ್ತಿಗೆ ತಂಗಿ ನಿನ್ನ ಆಟ ನಡೆಯೋದಿಲ್ಲ...' ಎಂದು ಹಾಡಿದರೇ ಸಮಾಧಾನ. ಒಬ್ಬರು ಹಾಡಲು ಶುರು ಮಾಡಿದರೆ, ತಾಳ ವಾದ್ಯಗಾರರು ತಂತಾನೆ ರೆಡಿಯಾಗಿ ಬಿಡುತ್ತಿದ್ದರು. ಹೋಂ ವರ್ಕ್ ಮಾಡುತ್ತಿದ್ದವರು ಟೇಬಲ್ ಕುಟ್ಟಿದರೆ, ಅಡುಗೆ ಮಾಡುತ್ತಿದ್ದವರು ಸಾಸಿವೆ ಡಬ್ಬಿ ಬಡಿಯುತ್ತಿದ್ದರು. ಏನೂ ಕೈಯಲ್ಲಿ ಇಲ್ಲದವರು ತೊಡೆಗಳನ್ನು ತಟ್ಟಿಕೊಳ್ಳುತ್ತ ಓಡಾಡುತ್ತಿದ್ದರು. 'ಓ ನಲ್ಲನೆ ಸವಿಮಾತೊಂದ ನುಡಿವೆಯಾ' ಹಾಡಿಕೊಳ್ಳುತ್ತ ಮಧ್ಯೆ ಸಂಗೀತ ನಿರ್ದೇಶಕ ಸತ್ಯಂ ನೀಡಿರುವ 'ಟಿಡಿಂಗ್ ಟಿಡಿಂಗ್ ಟಿಡಿಂಗ್ ಟಿಡಿಂಗ್' ಎಂಬ ವಿಶೇಷ ಎಫೆಕ್ಟನ್ನು ಹಾಡಿಕೊಳ್ಳದಿದ್ದರೆ ಏನೋ ಕಳೆದುಕೊಂಡ ಭಾವ. ನಮ್ಮ ಈ ಅವತಾರಗಳನ್ನೆಲ್ಲ ನಮ್ಮ ಹಿರಿಯರು ಹೇಗೆ ಸಹಿಸಿಕೊಳ್ಳುತ್ತಿದ್ದರೋ. ನಮ್ಮೂರಲ್ಲಿ ವರ್ಷಕ್ಕೊಮ್ಮೆ ನಾಟಕ ಮಾಡುವಾಗ ಸ್ತ್ರೀ ಪಾತ್ರಗಳನ್ನು ಹೊರಗಿಂದ ಕರೆಸುತ್ತಿದ್ದರು. ಕರಿಬಂಟನ ಕಾಳಗ, ತಾಯಿಕರುಳು ಇಂಥ ನಾಟಕ ಬಯಲಾಟಗಳ ಮಧ್ಯೆ ಮನರಂಜನೆಗಾಗಿ ಸಿನಿಮಾಗೀತೆ ಹಾಡಿಕೊಂಡು ಕರೆಸಿದ್ದ ನಾಯಕಿಯನ್ನು ಕುಣಿಸಿದರೆ ಕೊಟ್ಟ ದುಡ್ಡಿಗೆ ಮೋಸವಿಲ್ಲ ಎಂಬುದು ಆಗಿನ ವೀಕ್ಷಕ ಗಣದ ಭಾವನೆಯಾಗಿತ್ತು. 'ಚಂಗು ಚಂಗೆಂದು ಹಾರುವ ರಂಗು ರಂಗಿನ ಈ ಜಿಂಕೆ' ಈ ಹಾಡು ನನ್ನ ಮನೋಭಿತ್ತಿಯನ್ನು ಪ್ರವೇಶ ಮಾಡಿದ್ದೇ ಅಲ್ಲಿಂದ. ಅಲ್ಲಿ ಮೊದಲ ಮೂರು ನಾಲ್ಕು ಪದಗಳ ನಂತರ ತಬಲಾ ಪ್ರವೇಶಿಸುತ್ತದೆ. ಅದು ನನ್ನ ಪರಮ ಆಕರ್ಷಣೆಯ ಭಾಗವಾಗಿತ್ತು. ಮುಂಭಾಗದಲ್ಲಿ ಕೂತಿದ್ದ ತಬಲಾದವ ಅದಕ್ಕೇ ಕಾದಿದ್ದವನಂತೆ ಕುಟ್ಟಿ ಬಜಾಯಿಸುವುದನ್ನು ಕಂಡು ಅದೆಷ್ಟು ಸಲ ಆನಂದ ಪಟ್ಟಿದ್ದೆನೋ. ಈ ಹಾಡು ಮುಗಿಯುತ್ತಿರಲಿಲ್ಲ. ಒನ್ಸ್ ಮೋರ್ ಒನ್ಸ್ ಮೋರ್ ಎಂದು ಎರಡು ಮೂರು ಸಲ